

ಛಾಯಾಗ್ರಾಹಕನ ಎದುರಿನಲ್ಲಿ ಬಗೆಬಗೆಯ ಸರ್ಕಸ್ ಮಾಡುತ್ತ ಮೋಜು ಮಾಡಬಹುದಾ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ಹೇಳಬೇಕಾಗಿಲ್ಲ, ಇಲ್ಲಿನ ಚಿತ್ರಗಳನ್ನು ನೀವು ನೋಡಿದರೆ ಸಾಕು.

ಈ ಚಿತ್ರಗಳನ್ನು ತೆಗೆದಿರುವುದು ಇಂಡೊನೇಷ್ಯಾದ ಪ್ರಸಿದ್ಧ ವನ್ಯಜೀವಿ ಛಾಯಾಗ್ರಾಹಕ ಅಜರ್ ಸೆಟಿಯಾಡಿ. ಇಂಡೋನೇಷ್ಯಾದ ಬೊಗೊರ್ ನಿವಾಸಿಯಾದ ಅವರ ಮನೆಯ ಹಿತ್ತಿಲು ಕಪ್ಪೆಗಳ ಸಾಮ್ರಾಜ್ಯ. ಅಜರ್ ಕ್ಯಾಮೆರಾ ಹಿಡಿದು ಹಿತ್ತಿಲಿಗೆ ಹೊರಟರೆ ಅವು ಬಂದು ಬಗೆಬಗೆಯ ಪೋಸ್ ಕೊಟ್ಟು ನಲಿದಾಡುತ್ತವೆ. ತಾ ಮುಂದು ತಾ ಮುಂದು ಎಂದು ಮುಗಿಬಿದ್ದು ಚಿತ್ರ ತೆಗೆಸಿಕೊಳ್ಳುತ್ತವೆ. ಅಜರ್ ಜೊತೆಗೆ ಆಡುತ್ತವೆ, ಕುಣಿಯುತ್ತವೆ. ಕಪ್ಪೆಗಳ ಜಗತ್ತನ್ನು ತುಂಬ ಭಿನ್ನವಾಗಿ ಕಟ್ಟಿಕೊಟ್ಟಿರುವ ಅಜರ್ ಜೊತೆಗೆ ನಡೆಸಿದು ಚುಟುಕು ಮಾತುಕತೆಯ ಜೊತೆಗೆ ಕಣ್ಸೆಳೆಯುವ ಚಿತ್ರಪಟವೂ ಇಲ್ಲಿದೆ.

◆ **ಮಂಡೂಕ ಛಾಯಾಗ್ರಹಣದಲ್ಲಿ ನೀವು ಆಸಕ್ತಿ ಬೆಳೆಸಿಕೊಂಡಿದ್ದು ಹೇಗೆ?**

ಬರೀ ಕಪ್ಪೆಗಳಷ್ಟೇ ಅಲ್ಲ, ಎಲ್ಲ ಪ್ರಾಣಿಗಳ ಛಾಯಾಗ್ರಹಣವೂ ನನಗೆ ಇಷ್ಟವೇ... ಹಕ್ಕಿಗಳು, ಸಸ್ತನಿಗಳು, ಕೀಟಗಳು – ಹೀಗೆ ಎಲ್ಲ ಪ್ರಾಣಿಗಳ ಫೋಟೊಗಳನ್ನೂ ತೆಗೆಯುತ್ತೇನೆ.



ಅಜರ್ ಸೆಟಿಯಾಡಿ

◆ **ಕಪ್ಪೆಗಳು ಹೇಳಿ ಕೇಳಿ ನಾಚಿಕೆ ಸ್ವಭಾವದ ಪ್ರಾಣಿಗಳು. ಆದರೆ ನಿಮ್ಮ ಮಂಡೂಕ ಸರಣಿಯನ್ನು ನೋಡಿದರೆ ಅವು ನಿಮ್ಮ ಕ್ಯಾಮೆರಾಗೆ ಮಾಡೆಲ್‌ಗಳಾಗಿ ಪೋಸ್ ಕೊಟ್ಟ ಹಾಗಿವೆ. ಅವರ ಜೊತೆ ನೀವು ಸಲಿಗೆ ಬೆಳೆಸಿಕೊಂಡಿದ್ದು ಹೇಗೆ?**

ಪ್ರಾಣಿಗಳನ್ನು ಸಾಕುವುದೆಂದರೆ ನನಗೆ





